## ಮಧ್ಯಂತರ ಅರ್ಜಿ ನಂ.XIV ರ ಮೇಲೆ ಆದೇಶ

1. ಅರ್ಜಿದಾರರು/ವಾದಿಯರ ಪರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ದಾವೆಯಲ್ಲಿ ಅರ್ಜಿಯಲ್ಲಿ ತಿಳಿಸಿದ ಸಾಕ್ಷಿದಾರರ ಸಾಕ್ಷಿಯನ್ನು ಮಾಡಿಸುವುದು ಅತೀ ಅವಶ್ಯವಿರುತ್ತದೆಂದು ವಿನಂತಿಸಿರುತ್ತಾರೆ. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಅರ್ಜಿಯಲ್ಲಿ ತಿಳಿಸಿದ 1 ನೇ ಸಾಕ್ಷಿದಾರನು ಅಸಲು ದಾವೆ ನಂ. 6/2004 ರಲ್ಲಿ ದಾವಾ ಸ್ಥಳಕ್ಕೆ ಭೇಟಿ ನೀಡಿ ವರದಿ ನೀಡಿರುತ್ತಾರೆ. ಸದರಿ ವರದಿ ಪ್ರಕಾರ ವಾದಿಯರು ಉಪಯೋಗಿಸಿರುವ ದಾರಿಯ ಗುರುತು, ನೀರಿನ ಕಾಲುವೆ ಗುರುತು, ದನಕರುಗಳು ತಿರುಗಾಡಲು ಉಪಯೋಗಿಸುತ್ತಿದ್ದ ದಾರಿ ಬಗ್ಗೆ ಹಾಗೂ 5 ಮತ್ತು 6 ನೇ ಪ್ರತಿವಾದಿಯರು ಉತ್ತರ-ದಕ್ಷಿಣ ಗಡಿಧರೆ ಹಾನಿ ಮಾಡಿದ ಬಗ್ಗೆ ವರದಿಯಲ್ಲಿ ತಿಳಿಸಿರುತ್ತಾರೆ. ಸದರಿ ವರದಿಗಳನ್ನು ನಿ.ಪಿ. 9 ಮತ್ತು 10 ಎಂದು ಈ ದಾವೆಯಲ್ಲಿ ಗುರುತಿಸಲಾಗಿದೆ. ನಿಶಾನೆ ಪಿ. 63, 64 ಮತ್ತು 65 ಎಂದು ಗುರುತಿಸಲಾದ ದಾಖಲೆಗಳನ್ನು ರುಜುವಾತುಪಡಿಸಲು 2 ನೇ ಸಾಕ್ಷಿದಾರನ ಸಾಕ್ಷಿ ಅವಶ್ಯವಿರುತ್ತದೆ. 3 ನೇ ಸಾಕ್ಷಿದಾರನು ಮೂಲ ದಾವಾ ನಂ. 6/2004 ರಲ್ಲಿ ಮಣ್ಣಿನ ಧರೆಯನ್ನು ಖುಲ್ಲಾಪಡಿಸಿ ಸಮತಟ್ಟು ಮಾಡಿರುವ ಕುರಿತು ದಿನಾಂಕಃ 7.02.2004 ರಂದು ನೀಡಿದ ಪತ್ರ ನಿಪಿ 19 ಎಂದು ಗುರುತಿಸಲಾಗಿದ್ದು,

ಈ ಎಲ್ಲ ದಾಖಲೆಗಳಲ್ಲಿನ ವಿಷಯಗಳನ್ನು ಸಾಕ್ಷಿದಾರರ ಮೂಲಕ ಸಾಬೀತುಪಡಿಸುವುದು ಅತೀ ಅವಶ್ಯವಿರುತ್ತದೆ. ಕಾರಣ ವಾದಿಯರ ಪರ ಮುಂದುವರಿದ ಸಾಕ್ಷಿ ಎಂದು ಪರಿಗಣಿಸಲು ವಿನಂತಿಸಿರುತ್ತಾರೆ. ಸದರಿ ಅರ್ಜಿಗೆ ಪೂರಕವಾದ ನಿರ್ಧರಿತ ಪ್ರಕರಣ ಹಾಗೂ ಲಿಖಿತ ವಾದವನ್ನು ಕೂಡಾ ನೀಡಿರುತ್ತಾರೆ.

**2.** ಸದರಿ ಅರ್ಜಿಯನ್ನು ಮೌಖಿಕ ತಕರಾರು ಸಲ್ಲಿಸುವುದರ ಮುಖಾಂತರ ಪ್ರತಿವಾದಿಯರ ಪರ ಅಲ್ಲಗಳೆದಿದ್ದು, ಎರಡೂ ಕಡೆ ವಾದ ವಿವಾದ ಆಲಿಸಿದ ನಂತರ , ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ...

**<u>ಅಂಶಗಳು</u>**

1. ಮಧ್ಯಂತರ ಅರ್ಜಿ ನಂ. 14 ರಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿಯರು ಅರ್ಹರಿರುತ್ತಾರೆಯೇ ?
2. ಯಾವ ಆದೇಶ ?

**<u>ಕಾರಣಗಳು</u>**

3. **<u>ಅಂಶ ನಂ.1</u>**:- ದಾವಾಸ್ತಿಯ ಕುರಿತು ನಿರ್ದೇಶನ ಹಾಗೂ ನಿರಂತರ ಮನಾಯಿ ಮತ್ತು ಚಿರಭೋಗದ ಹಕ್ಕಿನ ಕುರಿತಾಗಿ ವಾದಿಯರು ಪ್ರಸ್ತುತ ದಾವೆಯಲ್ಲಿ ಮಾಗಣಿ ಮಾಡಿರುತ್ತಾರೆ. ಕುಮಟಾ ತಾಲೂಕಿನ ಮಾದನಗೇರಿ ಗ್ರಾಮದ ಸ. ನಂ. 180 ವಿಸ್ತೀರ್ಣ 2.26.0 ಇದು

ದಾವಾಸ್ತಿಯಾಗಿದ್ದು, ಅದರ ಚೆಕ್‌ಬಂಧಿ ಸಹಿತ ವಿವರಣೆಯನ್ನು ದಾವಾ ಪರಿಶಿಷ್ಟದಲ್ಲಿ ತಿಳಿಸಿರುತ್ತಾರೆ. ವಾದಿಯರು ತಮ್ಮ ಸಾಕ್ಷಿ ಮುಗಿದ ನಂತರ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಸಾಕ್ಷಿದಾರರ ಪಟ್ಟಿಯನ್ನು ನೀಡಿ ಈಗಾಗಲೇ ಮೇಲೆ ತಿಳಿಸಿದಂತೆ ತಮ್ಮ ಪ್ರಮಾಣಪತ್ರದಲ್ಲಿ ಸಾಕ್ಷಿದಾರರ ಹೇಳಿಕೆ ಮಹತ್ವವನ್ನು ವಾದಿಯರ ಪರವಾಗಿ ಪ್ರಮಾಣಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಪಕ್ಷಗಾರರ ನಡುವೆ ಇರುವ ವಿವಾದದ ಕುರಿತು ಯಾವುದಾದರೂ ಪಕ್ಷಗಾರರು ವರದಿ ವ ಸ್ಥಳ ವೀಕ್ಷಣೆ ಬಗ್ಗೆ ಸಾಕ್ಷಿ ಹಾಜರುಪಡಿಸಿದರೆ , ಅಂತಹ ವ್ಯಕ್ತಿಗಳ ಸಾಕ್ಷಿ ಪರಿಗಣಿಸದೇ ಕೇವಲ ಅವರು ನೀಡಿದ ವರದಿ ಮೇಲಿಂದ ಪ್ರಕರಣ ನಿರ್ಧರಿಸಲಾಗದು ಹಾಗೂ ಅಂತಹ ವರದಿಗಳು ಸಾಕ್ಷಿ ಎಂದು ಪರಿಗಣಿಸಲಾಗದು. ಕಾರಣ ಸದರಿ ಸಾಕ್ಷಿದಾರರ ಹೇಳಿಕೆಗಳ ಮಹತ್ವವನ್ನು ವಾದ ವಿವಾದದಲ್ಲಿ ಎರಡೂ ಪಕ್ಷಗಾರರು ನ್ಯಾಯಾಲಯಕ್ಕೆ ತಿಳಿಸಲು ಅವಕಾಶವಿರುತ್ತದೆ. ಕಾರಣ ಅಂಶ ನಂ. 1 ಕ್ಕೆ **"ಸಕಾರಾತ್ಮಕ"** ಎಂದು ಉತ್ತರಿಸಿದ್ದೇನೆ.

4. **ಅಂಶ ನಂ.2ಃ** ಮೇಲೆ ಚರ್ಚಿಸಿದ್ದರ ಅನುಗುಣವಾಗಿ ಈ ಕೆಳಗಿನಂತೆ....

**ಆದೇಶ**

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 16 ನಿಯಮ 1, 2 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಅರ್ಜಿಯಲ್ಲಿ ತಿಳಿಸಿದ ಸಾಕ್ಷಿದಾರರ ಕರೆಗೆ ಪಿಎಫ್ ನೀಡಿದರೆ ಸಾಕ್ಷಿ ಸಮನ್ಸ್ ಕಳಿಸಿ ಕೊಡಲು ಕಚೇರಿಗೆ ಈ ಮೂಲಕ ತಿಳಿಸಲಾಗಿದೆ.

ವಾದಿಯರ ಪರ ಮುಂದುವರಿದ ಸಾಕ್ಷಿಗಾಗಿ ಪ್ರಕರಣವನ್ನು ದಿನಾಂಕಃ 08.08.2022 ರಂದು ಕರೆಯಿರಿ.

Sd/-

**ದಿವಾಣಿ ನ್ಯಾಯಾಲಯ , ಅಂಕೋಲಾ**